
ಕತೆ ಓದಿದ ನಂತರದ ಮನಸ್ಸಿನ ಹೊಯ್ದಾಟದ ಅನಂತರ ನಾನು ವಿಶ್ವಜಿತ್‌ನನ್ನು ಭೇಟಿ ಮಾಡಲು ನಿರ್ಧರಿಸಿದೆ. ಇಪ್ಪತ್ತು ವರ್ಷಗಳಲ್ಲಿ ಅವನು ಕೊಂಚ ದಢೂತಿಯಾಗಿದ್ದ. ಗಡ್ಡ ಬಿಟ್ಟಿದ್ದರೂ ಅವನ ಮುಖದಲ್ಲಿ ಆ ಲವಲವಿಕೆ ಹಾಗೇ ಇತ್ತು. ಮಾತಿನ ಮಧ್ಯೆ ಮತ್ತೆ ಮತ್ತೆ ನನ್ನ ಸುರಭಿ ನನ್ನ ಸುರಭಿ ಅಂತ ಒತ್ತಿ ಒತ್ತಿ ಹೇಳುತ್ತಿದ್ದ. ತಾನು ಕೆಲಸದ ಮೇಲೆ ಓಡಾಡುವ ಇಂಫಾಲ, ಪುಣೆ, ಜಮ್‌ಶಡ್‌ಪುರ್‌ಗಳ ಕತೆಯನ್ನೆಲ್ಲಾ ಹೇಳುತ್ತಾ ಕವಿತೆ ಬರೆಯುವುದನ್ನು ಬಿಟ್ಟು ಕತೆ ಬರೆಯುವುದಕ್ಕೆ ಯಾಕೆ ತೊಡಗಿದೆ, ಹೇಗೆ ತೊಡಗಿದೆ ಅಂತ ಕೊಂಚ ಹೆಚ್ಚೇ ವಿವರಿಸುತ್ತಾ ಹೋದ. ಅವನ ವಿವರಣೆಯಲ್ಲಿ ಮೊದಲಿನ ಆತ್ಮೀಯತೆ, ಸಲುಗೆ ಇತ್ತೇ ಹೊರತೂ ಅದರಲ್ಲಿ ಯಾವುದೇ ಅನಗತ್ಯ ಕೊಂಕಾಗಲೀ, ನಂಜಾಗಲೀ ಕಾಣಲೇ ಇಲ್ಲ. ಈ ಸಲ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಈ ಪುಸ್ತಕವನ್ನು ಕಳಿಸುವಂತೆ ಗೊತ್ತಿರುವ ದೆಹಲಿಯ ಗಣ್ಯರು ಹೇಳಿದ್ದಾರೆಂದೂ, ಈ ಸಂಗ್ರಹಕ್ಕೆ ಖಂಡಿತ ಪ್ರಶಸ್ತಿ ಬಂದೇಬರುತ್ತದೆಂದೂ ನಂಬಿದಂತೆ, ನನ್ನನ್ನೂ ನಂಬಿಸುವಂತೆ ಮಾತಾಡಿದ. ಫೇಸ್‌ಬುಕ್, ಸ್ಟೇಟಸ್ಸು, ಎಡ, ಬಲ, ಸುರಭಿಗಿರುವ ಫೇಸ್‌ಬುಕ್ ಭಯ, ಅವಳ ಅನಾಮಧೇಯತೆಯ ಆಸೆ ಎಲ್ಲವನ್ನೂ ಹೇಳುತ್ತಾ ಹೇಳುತ್ತಾ ಇನ್ನಷ್ಟು ಹೆಚ್ಚು ಆತ್ಮೀಯನಾಗುತ್ತಾ ಹೋದಹಾಗೇ ನನಗೆ ಜ್ವರವೇ ಬಂದ ಹಾಗಾಯಿತು.




ಕಾರ್ಡು ಕೊಟ್ಟು, ಬಿಲ್ಲು ತೆತ್ತು ಹೊರಡಲು ಪಾರ್ಕಿಂಗಿಗೆ ಬಂದಾಗ ಅಲ್ಲಿ ಒಂದು ಬಗೆಯ ವಿಚಿತ್ರ ಕತ್ತಲೆ, ಮೌನವಿತ್ತು. ಏನನ್ನಿಸಿತೋ ಏನೋ ನನ್ನ ಕೈ ಹಿಡಿದುಕೊಂಡು ನೀನು ಸಿಕ್ಕಿದ್ದು ಬಹಳ ಖುಷಿಯಾಯಿತು ಎಂದ. ಸುರಭಿಗೆ ನನ್ನ ನೆನಪೆಲ್ಲಾ ಉಂಟಾ ಮಾರಾಯಾ ಅಂತ ನಾನು ಸೂಕ್ಷ್ಮವಾಗಿಯೇ ಕೇಳಿದೆ. ಏನೋ ಗೊತ್ತಿಲ್ಲ, ಆದರೆ ನಿನಗೆ ಸಾಹಿತ್ಯದ